ವಿಷಯ: ಮಂಗಳೂರು ಹ್ಯೊಗೆ ಬಜಾರ್ ನದಿತೀರ ಅಭಿವೃದ್ಧಿ.

1218 (1689)

ಶ್ರೀ ಯೋಗೇಶ್ ಭಟ್ (ಮಂಗಳೂರು): ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

1. ಮಂಗಳೂರು ಹ್ಯೊಗೆ ಬಜಾರ್‌ನ ನದಿ ತೀರದಲ್ಲಿರುವ ಪ್ರಾಕೃತಿಕ ಕ್ರೀಕ್‌ನಲ್ಲಿ ಕಳೆದ ಹಲವು ದಶಕಗಳಿಂದ ಸುಮಾರು 300 ಬೋಟುಗಳು ಮಳೆಗಾಲದಲ್ಲಿ ತಂಗುತ್ತಿರುವುದು ಮಳೆಗಾಲದಲ್ಲಿ ತಂಗುತ್ತಿರುವುದು ಹಾಗೂ ಬೋಟು ದುರಸ್ತಿ ಕಾರ್ಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಪ್ರಾಕೃತಿಕವಾದ ಕ್ರೀಕ್‌ನಲ್ಲಿ ಮಣ್ಣು ಅಧಿಕದಷ್ಟು ತುಂಬಿದ್ದು ಇದನ್ನು ತೆಗೆದು ಪುನಃ ಹಿಂದಿನಂತೆ ಉಪಯುಕ್ತಗೊಳಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆಗಳಾವುವು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ಸಚಿವರು):

1. ಹೌದು, ಮಳೆಗಾಲದಲ್ಲಿ ಬೋಟುಗಳನ್ನು ದುರಸ್ತಿಗೊಳಿಸುವುದಕ್ಕೋಸ್ಕರ ಕ್ರೀಕ್‌ನ ದಡದ ಮೇಲೆ ತರಲಾಗುತ್ತದೆ.

2. ಸಧ್ಯಕ್ಕೆ ಈ ಕ್ರೀಕ್‌ನಲ್ಲಿ ಹೂಳೆತ್ತುವ ಪ್ರಸ್ತಾವನೆ ಇರುವುದಿಲ್ಲ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ಗಮನಕ್ಕೆ ತರುವುದೇನೆಂದರೆ, ಮಾನ್ಯ ಸದಸ್ಯರಾದ ಸಭಾಪತಿಯವರು ನನಗೊಂದು ಪತ್ರ ಬರೆದು ಕಳುಹಿಸಿದ್ದಾರೆ. ಅವರು ಕಳುಹಿಸಿರತಕ್ಕ ಪ್ರಶ್ನೆಗಳ ಪೈಕಿ ಸುಮಾರು 80 ಪ್ರಶ್ನೆಗಳಿಗೂ ಮೇಲ್ಪಟ್ಟು ಪ್ರಶ್ನೆಗಳಿಗೆ ವಿವಿಧ ಇಲಾಖಾ ಸಚಿವರುಗಳಿಂದ ಉತ್ತರಗಳು ಬಂದಿಲ್ಲವೆಂದು ಹೇಳಿದ್ದಾರೆ. ತಾವು ದಯಮಾಡಿ, ಅನೇಕ ಸದಸ್ಯರೂ ಇದೇ ಮಾತು ಹೇಳುತ್ತಿದ್ದಾರೆ. ಪೆಂಡಿಂಗ್ ರಿಪ್ಲೈಸ್ ಯಾವು ಇವೆ, ಸ್ವಲ್ಪ ಕ್ವಿಕ್ ಆಗಿ ತರಿಸಿಕೊಡುವುದಕ್ಕೆ ಪ್ರಯತ್ನಪಡಿ.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ ಅನುಚ್ಛೇದ 243-ಐ(4) ಮತ್ತು 243-ವೈ(2)ರನ್ವಯ ರಾಜ್ಯಪಾಲರ ಆದೇಶಾನುಸಾರವಾಗಿ ಹಣಕಾಸು ಆಯೋಗದ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಮಾನ್ಯ ಖರ್ಗೆಯವರೇ, ತಾವೇನು ನಿಲುವಳಿ ಸೂಚನೆ ಮೇಲೆ ಮಾತನಾಡುತ್ತೀರಾ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ತಾವೇ ಹೇಳಿದಿರಿ. ಚರ್ಚೆಗೆ ಆಮೇಲೆ ತೆಗೆದುಕೊಳ್ಳುತ್ತೇನೆಂದು, ಅಲ್ಲಿಗೆ ಮುಗಿದುಹೋಯಿತಲ್ಲಾ.

ಅಧ್ಯಕ್ಷರು: ತೆಗೆದುಕೊಳ್ಳೋಣ. But to take it up under Rule 60, it may not look nice.... we will take it up for discussion. ಆಮೇಲೆ ತೆಗೆದುಕೊಳ್ಳುತ್ತೇನೆ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡತಕ್ಕ ವಿಷಯಗಳು ಕೆಲವು ಇವೆ. ಇವುಗಳನ್ನು ಒಂದು ನಿಮಿಷಕ್ಕಿಂತ ಜಾಸ್ತಿ ತೆಗೆದುಕೊಳ್ಳದೆ ಪ್ರಸ್ತಾಪ ಮಾಡಲಿ, ಎಲ್ಲಾ ಸದಸ್ಯರಿಗೂ ಅಕಾಮಡೇಟ್ ಮಾಡುತ್ತೇನೆ. ಆಮೇಲೆ, ನಿಮ್ಮ ವಿಷಯವನ್ನು ರೈಸ್ ಮಾಡಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನಗೇನೂ ಅಭ್ಯಂತರವಿಲ್ಲ. ಏಕೆಂದರೆ, ಅದೂ ಬಹಳ ಮುಖ್ಯವಾದದ್ದೇ ಇದೆ. ಮತ್ತು ಸದನದಲ್ಲಿ ಈಗಾಗಲೇ ವರದಿಯನ್ನು ಸಲ್ಲಿಸಿದ್ದಾರೆ. ರೈತರ ಆತ್ಮಹತ್ಯೆ ಮತ್ತು ಬೆಳೆ ಹಾನಿ ಬಗ್ಗೆ.

ಅಧ್ಯಕ್ಷರು: ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ, ಶೂನ್ಯವೇಳೆಯಲ್ಲಿ ಕೆಲವು ಸಣ್ಣಪುಟ್ಟ ರಿಕ್ವೆಸ್ಟ್ಸ್ ಇವೆ, ಅವುಗಳನ್ನು ಮೊದಲು ಕನ್‌ಸೀಡ್ ಮಾಡಿಕೊಳ್ಳೋಣ. ಆದಾದ ಮೇಲೆ, ಇಮ್ಮೀಡಿಯಟ್ ಆಗಿ ನಿಮ್ಮ ವಿಷಯ ತೆಗೆದುಕೊಳ್ಳೋಣ.

ಶ್ರೀ ಕೆ.ಎಸ್.ಈಶ್ವರಪ್ಪ: ಮೈಸೂರು ಪೇಪರ್ ಮಿಲ್ಸ್ ವಿಚಾರದ ಬಗ್ಗೆ ಕಮಿಟಿಗೆ ಹಾಕಿ ಎನ್‌ಕ್ವೈರಿ ಮಾಡಿಸಲಾಗುವುದೆಂದು ಹೇಳಿದ್ದೀರಿ, ಆದರೆ ಆ ಕಮಿಟಿಯೇ ಇನ್ನೂ ಆಗಿರುವುದಿಲ್ಲ. ಎನ್‌ಕ್ವೈರಿ ಮಾಡುವ ದೃಷ್ಟಿಯಿಂದ ಸಾರ್ವಜನಿಕ ಉದ್ದಿಮೆ ವಿಷಯವನ್ನು ಕಮಿಟಿಗೆ ಹಾಕುತ್ತೇನೆಂದು ಹೇಳಿದ್ದಿರಿ. ಈಗಾಗಲೇ 40 ದಿನ ಆಗಿಹೋಗಿದೆ.

ಅಧ್ಯಕ್ಷರು: ಮಾನ್ಯ ಸುರೇಶ್‌ಕುಮಾರ್ ಅವರಿಂದ ಪತ್ರ ಬಂದಿದೆ. ಅದನ್ನು ಎಕ್ಸ್‌ಟೆಂಡ್ ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಎಕ್ಸ್‌ಟೆಂಡ್ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಡಿಲೇ ಆದಷ್ಟು ಅವರಿಗೇ ಅನುಕೂಲ. ಆದರೆ, ದಯವಿಟ್ಟು ಬೇಗ ಕಮಿಟಿ ಅನೌನ್ಸ್ ಮಾಡಿದರೆ ಒಳ್ಳೆಯದು.

MR. SPEAKER: I can see your point.